ನೋಡಿದಾಗಲೆಲ್ಲ ಸೊಸೆ ಸಿರೀಶಾಳ ನೆನಪಾಗುತ್ತದೆ ಸುನಂದೆಗೆ. ಅವಳೂ ಹಾಗೇ... ಮೂರುವರ್ಷಗಳ ಹಿಂದೆ ಮನೆಗೆ ಬಂದಾಗ ಹೀಗೇ... ವೈಶಾಖದ ನದಿಯಂತಿದ್ದಳು. ಲಜ್ಜೆ, ಸಿಗ್ಗು, ಮೌನ, ಶಾಂತ... ತಾನಿರುವುದೇ ಗೊತ್ತಾಗದಂತೆ. ಇಂತಹ ಸೊಸೆಯೊಬ್ಬಳು ತಮ್ಮ ಮನೆಗೆ ಬರುವುದು ಪರಮ ಸೌಭಾಗ್ಯವೆನಿಸಿತ್ತು.

ತಾವು ಎಲ್ಲ ಅತ್ತೆ ಸೊಸೆಯರಂತೆ ಅಲ್ಲವೇ ಅಲ್ಲ, ತಮ್ಮಿಬ್ಬರ ನಡುವೆ ಅಹಿತಕರವಾಗಿ ಏನೂ ನಡೆಯುವುದೇ ಇಲ್ಲ ಅಂದುಕೊಂಡಿದ್ದ ಸುನಂದೆಗೆ ಮೊದಲ ಆಘಾತವಾಗಿದ್ದು ಆ ದಿನ... ಹಳ್ಳಿಗೆ ಬಂದು ವಾಪಸು ಮನೆಗೆ ಹೋದಾಗ... ಮಧ್ಯಾಹ್ನ ಮೂರರ ಹೊತ್ತು ಮನೆಯಲ್ಲಿ ಯಾರು ಇರಲಿಲ್ಲ. ಹಳ್ಳಿಯಿಂದಲೇ ಒಂದಿಷ್ಟು ಬುತ್ತಿ ಕಟ್ಟಿಕೊಟ್ಟಿದ್ದರು ಅತ್ತೆ. ಮನೆಯೊಳಗೆ ಲಗೇಜಿಳಿಸಿಕೊಂಡು ಕೈಕಾಲು ತೊಳೆದು ಊಟಕ್ಕೆಂದು ಡೈನಿಂಗ್ ಟೇಬಲ್ಲಿನ ಮೇಲೆ ಕೂತಾಗ ಮೊಸರಿನ ನೆನಪಾಗಿ ಫ್ರಿಡ್ಜಿನ ಬಾಗಿಲು ತೆಗೆದಾಗ ರಾಚುವಂತೆ ಕಣ್ಣಿಗೆ ಕಂಡಿದ್ದು ಪಾರದರ್ಶಕ ಪ್ಲಾಸ್ಟಿಕ್ಕಿನಲ್ಲಿರಿಸಿದ್ದ ಮಾಂಸದ ತುಣುಕುಗಳು! ಮದುವೆಯಾಗುವಾಗಲೇ ಸಿರೀಶಾರೆಡ್ಡಿ ಮಾಂಸಾಹಾರಿಯೆಂದು ಗೊತ್ತಿತ್ತು. ನಾನವಳಿಗೆ ಹೇಳಿದ್ದೆ, 'ನೀನು ತಿನ್ನಲು ಅಭ್ಯಂತರವಿಲ್ಲ, ಆದರೆ ಮನೆಯಲ್ಲಿ ಮಾಡುವಂತಿಲ್ಲ' ಎಂದು. 'ಖಂಡಿತ ನಾನೂ ಮಾಂಸಾಹಾರ ತ್ಯಜಿಸಿಬಿಡುವೆ' ಎಂದು ಮನಸ್ಸಿಗೆ ತಂಪೆರಚಿದ್ದಳು. ಆ ಮನೆಯ ಊಟೋಪಚಾರಗಳನ್ನು ಇಷ್ಟಪಟ್ಟೇ ತಿನ್ನುತ್ತಿದ್ದಳು. ಎಲ್ಲವೂ ಸರಿಯಾಗಿದೆ ಎಂದುಕೊಂಡಿದ್ದಳು ಸುನಂದೆ. ತಮ್ಮದೇ ಜಾತಿಯಲ್ಲಿ ಹುಡುಕಿದ್ದರೂ ತನಗಿಂತಹ ಸೊಸೆ ಸಿಗುತ್ತಿರಲಿಲ್ಲವೆಂದುಕೊಂಡು ಬಲವಾಗಿ ನಂಬಿಕೊಂಡಿದ್ದಳು. ಹಾಗಿರುವಾಗ...

ಆ ಸಂಜೆ ಚಿಕನ್ನಿನ ತುಣುಕುಗಳನ್ನಿರಿಸಿದ್ದ ಕುರಿತು ಮೌನವಾಗಿಯೇ ಆದರೂ ಬಿಗಿಯಾಗಿ ಕೇಳಿದ್ದಳು ಸುನಂದೆ. ಸೊಸೆಯ ಉತ್ತರವೂ ಅಷ್ಟೇ ಬಿಗಿತುಕೊಂಡಿತ್ತು. 'ಹುಂ, ತುಂಬ ದಿನವಾಗಿತ್ತು. ಚಿಕನ್ನಿನ ಕ್ರೇವಿಂಗ್ ಶುರುವಾಯ್ತು. ನೀವಿರಲಿಲ್ಲವಲ್ಲ... ತಂದು ಮಾಡಿಕೊಂಡೆವು. ನಮ್ಮಿಬ್ಬರಿಗೆ ಹೆಚ್ಚಾಯಿತೆಂದು ಉಳಿಸಿಬಿಟ್ಟೆ. ನನಗೊಬ್ಬಳಿಗಾಗಿ ಅಲ್ಲ; ನಿಮ್ಮ ಮಗನೂ ಚಿಕನ್ ಪ್ರಿಯನೆ. ಬೆಳಗ್ಗೆ ಕೆಲಸದವಳಿಗೆ ಕೊಟ್ಟುಬಿಡಬೇಕೆಂದುಕೊಂಡಿದ್ದೆ. ಕೆಲಸಕ್ಕೆ ಹೋಗುವ ಅವಸರದಲ್ಲಿ ಮರೆತುಬಿಟ್ಟೆ' ಎಂದಳು. ಜೀವನದ ಮೊದಲ ದೊಡ್ಡ ಶಾಕಿಗೊಳಗಾಗಿದ್ದಳು ಸುನಂದೆ. ತಾನು ತನ್ನ ಕೈಯ್ಯಾರೆ ಬೆಳೆಸಿದ ಮಗ, ಸಸ್ಯಾಹಾರದ ವಿವಿಧ ರುಚಿಗಳಲ್ಲಿ ಬೆಳೆದ ಮಗ ಯಾವಾಗ ಮಾಂಸಾಹಾರಿಯಾದನೆಂಬುದೇ ಅವಳ ಅಚ್ಚರಿಯ ವಿಷಾದವಾಗಿತ್ತು. ಗಂಡ ಮಾತ್ರ, 'ಅವರವರಿಗೆ ಏನೇನು ಇಷ್ಟವೋ ಅದನ್ನು ಅವರವರು ತಿನ್ನೋತಾರೆ. ಆ ವಿಚಾರಕ್ಕೆ ಹೋಗಬೇಡ, ಗಾದೇನೇ ಇಲ್ವ... ಊಟ ತನ್ನಿಷ್ಟ ಅಂತ' ಅಂದಿದ್ದ. ಮಗ ಮಾತ್ರ, 'ಅವಳಿಗೆ ಚಿಕನ್ನೆಂದರೆ ಪ್ರಾಣಾಮ್ಮ, ಇದು ಅವಳ ಮನೆ. ನಿಮಗಾಗಿ ಅವಳು ತನ್ನ ಫುಡ್ ಬಿಡಕ್ಕಾಗಲ್ಲ. ಅರ್ಥಮಾಡ್ಕೋಮ್ಮ... ಅಜ್ಜಿ ತಾತ ಬೆಳ್ಳುಳ್ಳಿ ತಿಂತಿರ್ಲಿಲ್ಲ, ನಿನಗಾಗಿ ಅವರು ಹೊಂದಿಕೊಳ್ಳಲಿಲ್ವ?' ಎಂದ. 'ಅಲ್ಲ ಕಣೋ... ಬೆಳ್ಳುಳ್ಳಿ ಈರುಳ್ಳಿ ಸಸ್ಯಾಹಾರ ಅಲ್ವ? ಅದಕ್ಕೂ ಚಿಕನ್ನು ಮಟನ್ನು ತಿನ್ನಕ್ಕು ವ್ಯತ್ಯಾಸ ಇಲ್ವೇನೋ?' ಅಂದಳು. 'ಎಲ್ಲ ಒಂದೇ ಬಿಡಮ್ಮ, ಇಷ್ಟಕ್ಕೂ ಊಟದ ವಿಷಯಕ್ಕೆ ಯಾಕಿಷ್ಟು ಫಸ್ ಮಾಡ್ತೀಯ?' ಅಂತ ಕೇಳಿದ್ದ. ಏನೂ ಉತ್ತರಿಸಲಾಗಲಿಲ್ಲ. 'ಅದು ಸರಿ ಕಣೋ, ನೀನ್ಯಾವಾಗ ಚಿಕನ್ನು ತಿನ್ನಕ್ಕೆ ಶುರುಮಾಡಿದೆಯಪ್ಪ?' ಎಂದು ಕೇಳುವಷ್ಟರಲ್ಲಿ ಅವಳಿಗೆ ಅಳುವೇ ಬಂದುಬಿಟ್ಟಿತ್ತು. 'ಅಯ್ಯೋ ಬಿಡಮ್ಮ... ನಾನು ಯು.ಎಸ್.ನಲ್ಲಿ ಎಂ.ಎಸ್. ಮಾಡಕ್ಕೆ ಹೋದಾಗ ಅಭ್ಯಾಸವಾಗಿಬಿಡ್ತು. ಎಲ್ಲ ಫ್ರೆಂಡ್ಸೂ ಮಾಂಸಾಹಾರಿಗಳೇ ಅಲ್ವ... ಹಾಗಾಗಿ. ಅದ್ಯಾವ ದೊಡ್ಡ ವಿಷ್ಯ ಅಂತ ಅಳ್ತಿದೀಯ ನೀನು' ಎಂದು ಹಾಸ್ಯ ಮಾಡಿದ್ದ.

ಯಾವುದೂ ತನ್ನ ಕೈಯಲ್ಲಿಲ್ಲ ಅನ್ನಿಸತೊಡಗಿತು. ತಾನಿಲ್ಲಿ ಈ ಮನೆಯಲ್ಲಿ ಇದ್ದರೆ ಸೊಸೆಯ ಆಹಾರ ಪದ್ಧತಿಗೆ ಹೊಂದಿಕೊಳ್ಳಬೇಕಾಗುತ್ತೆ. ಕಡೆಯ ಪಕ್ಷ ಸಹಿಸಿಕೊಳ್ಳಬೇಕಾಗುತ್ತೆ ಎನ್ನುವುದು